**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆ ಇಲಾಖೆ.**

ಸಂಖ್ಯೆ/ವಾಶಾ/ಸಿಆರ್–30/2016–17/ಬಿ– /234

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಚೇರಿ
(ಜಾರಿ), ಉತ್ತರ ವಲಯ, ಬೆಳಗಾವಿ ವಿಭಾಗ
ಬೆಳಗಾವಿ, ದಿನಾಂಕ:–24/05/2016

**: ಪ್ರಕಟಣೆ :**

**ವಿಷಯ:** ಈ ಕಚೇರಿಯ ಸರಕಾರಿ ಅಧಿಕೃತ ಕೆಲಸಕ್ಕೆ 03 ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಸಾಮಾನ್ಯ ಟೆಂಡರ ಪ್ರಕ್ರಿಯೆ ಮುಖೇನ ಪಡೆಯುವ ಬಗ್ಗೆ.

**ಉಲ್ಲೇಖ:**

1) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 96: ಶಿವಾನೀ 2012, ಬೆಂಗಳೂರು ದಿನಾಂಕ 23–08–2012.
2) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು ಇವರ ಕಚೇರಿಯ ಪತ್ರ ಸಂ.: ವಿಕೆಚ್‌ಟಿ/ಸಿಆರ್–20/2013–14, ದಿನಾಂಕ: 30–09–2014.
3) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು ಇವರ ಕಚೇರಿಯ ಪತ್ರ ಸಂ.: ವಿಕೆಚ್‌ಟಿ/ಸಿಆರ್–20/2013–14ಮತ್ತು(ಮಾಸ್ಟರ ಫೈಲ) ದಿನಾಂಕ: 21–04–2016.

G L-1213/16-17
24-05-16

*********

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ ಇವರ ಕಛೇರಿಗೆ _03_ ಖಾಸಗಿ ವಾಹನಗಳನ್ನು ಪಡೆಯಲು ಈ ಕೆಳಗೆ ನಮೂದಿಸಿರುವ ಷರತ್ತಿಗೊಳಪಟ್ಟು ಟೆಂಡರ್‌ನ್ನು ಅಹ್ವಾನಿಸಲಾಗಿದೆ.

**ಷರತ್ತುಗಳು :–**

1) ವಾಹನವು 2012 ಮತ್ತು ಆ ನಂತರದ ವರ್ಷಗಳ ಮಾದರಿಯ ಚಾರ್ವಲೇಟ್ ಜಾಯ್, ಟಾಟಾ ಸುಮೋ, ಸ್ಕಾರ್ಪಿಯೋ, ಇನೋವಾ, ಮಹೇಂದ್ರಾ ಎಕ್ಷಯುವಿ, ಮತ್ತು ಬೊಲೆರೊ ಇತ್ಯಾದಿ ವಾಹನಗಳನ್ನು ಮಾತ್ರ ಪಡೆಯಲಾಗುವುದು. (2013 ಮತ್ತು 2014 ಮಾದರಿಯ ವಾಹನಗಳಿಗೆ ಆದ್ಯತೆ ನೀಡಲಾಗುವುದು)
2) ಸರಕಾರಿ ಆದೇಶದಂತೆ ಪ್ರತಿ ವಾಹನಕ್ಕೆ 2,500 ಕೀ.ಮೀಗೆ. ಗರಿಷ್ಠ ಮಾಸಿಕ ದರ ರೂ. 25,000/– ರಂತೆ, ತದನಂತರ ಓಡಿದಲ್ಲಿ ಪ್ರತಿ ಕೀ.ಮೀ. ದರ ರೂ. 5.50/–ರಂತೆ ಇರುತ್ತದೆ.
3) ವಾಹನ ಮತ್ತು ಚಾಲಕರಿಗೆ ಸಂಬಂಧಿಸಿದ ದಾಖಲೆಗಳ ದೃಢಾಕ್ಷ ಪ್ರತಿಗಳನ್ನು (ಮಾಲೀಕರ ಭಾವಚಿತ್ರ, ವಾಸ ಧೃಢೀಕರಣ ಪತ್ರ, ಖಾಯಂ ವಿಳಾಸದ ದಾಖಲೆ, ವಾಹನದ ನೋಂದಣಿ ಪ್ರಮಾಣ ಪತ್ರ, ಚಾಲನಾ ಪರವಾನಗಿ, ವಿಮಾ ಪಾಲಿಸಿ, ತೆರಿಗೆ ಪಾವತಿ ಪ್ರಮಾಣ ಪತ್ರ, ವೃತ್ತಿ ತೆರಿಗೆ ಪ್ರಮಾಣ ಪತ್ರ) ಸಲ್ಲಿಸುವುದು.

4) ಮಾಲೀಕರೆ ವಾಹನದ ಚಾಲಕರು / ಟ್ರಾವೆಲ್ ಏಜೆನ್ಸಿದಾರರು / ಸಂಸ್ಥೆಯಾದಲ್ಲಿ / ವೈಯಕ್ತಿಕ ವಾಹನ ಮಾಲೀಕರು ತಮ್ಮ ತಮ್ಮ ಖಾಯಂ ವಿಳಾಸ, ದೂರವಾಣಿ ಸಂಖ್ಯೆ ಮತ್ತು ವಾಹನ ಸೇವೆಯ ಅನುಭವದ ಬಗ್ಗೆ ದಾಖಲೆಗಳು, ಇ. ಎಸ್. ಐ ಮತ್ತು ಪಿ. ಎಫ್‌ಗಳ ದಾಖಲೆಗಳನ್ನು ಸಲ್ಲಿಸುವುದು.

5) ಟೋಲ್ ನಾಕಾದಲ್ಲಿಯ ರಸ್ತೆ ಕರ ವಾಹನದ ಮಾಲೀಕರೆ ತುಂಬಬೇಕು.

6) ವಾಹನವು ಕಚೇರಿಯ ಸಮಯದ ಅಥವಾ ಕರ್ತವ್ಯದ ನಂತರ ಕಡ್ಡಾಯವಾಗಿ ಕಚೇರಿಯ ಆವರಣದಲ್ಲಿ ನಿಲ್ಲಿಸಿ, ಸಂಬಂಧಿಸಿದ ಅಧಿಕಾರಿಯವರಿಗೆ ತಿಳಿಸಿ ಹೋಗಬೇಕು.

7) ವಾಹನವು ಸುಸ್ಥಿತಿಯಲ್ಲಿರಬೇಕು. ಮತ್ತು ದುರಸ್ಥಿ (ರಿಪೇರಿ & ಮೆಂಟೆನೆನ್ಸ್) ಮತ್ತು ಡಿಸೇಲ್ ಅಥವಾ ಪೆಟ್ರೋಲ ವಾಹನದ ಮಾಲೀಕರಿಗೆ ಸಂಬಂಧಿಸಿದ್ದು.

8) ಅನುದಾನದ ಲಭ್ಯತೆಯ ಮೇರೆಗೆ ಬಿಲ್ಲನ್ನು ಸಂದಾಯ ಮಾಡಲಾಗುವುದು.

9) ಸಂಬಂಧಿಸಿದ ತೆರಿಗೆಗಳನ್ನು ಕಡಿತಗೊಳಿಸಿ ಬಿಲ್ಲನ್ನು ಸಂದಾಯ ಮಾಡಲಾಗುವುದು.

10) ವಾಹನವು ದುರಸ್ಥಿಗೆ ಬಂದಲ್ಲಿ ಅಥವಾ ಚಾಲಕನು ಹಾಜರಾಗದಿದ್ದ ಸಂದರ್ಭದಲ್ಲಿ ಬದಲಿ ಚಾಲಕ / ವಾಹನದ ವ್ಯವಸ್ಥೆ ತಕ್ಷಣ ಮಾಡತಕ್ಕದ್ದು.

11) ವಾಹನದ ಅಥವಾ ಮಾಲೀಕರ ಮೇಲೆ ದೂರುಗಳು ಬಂದಲ್ಲಿ ವಿಚಾರಣೆ ನಡೆಸಿ ಯೋಗ್ಯ ಕ್ರಮ ಕೈಕೊಳ್ಳಲಾಗುವುದು.

12) ಮಾಲೀಕರೆ ಚಾಲಕರಾಗಿರುವ ವಾಹನಗಳು ಅಥವಾ ಏಜೆನ್ಸಿ /ಸಂಸ್ಥೆಯಿಂದ ವಾಹನಗಳನ್ನು ಪಡೆದಿದ್ದಲ್ಲಿ ಚಾಲನಾ ಕೌಶಲ್ಯವನ್ನು ಪರೀಶಿಲಿಸಿದ ನಂತರ ವಾಹನಗಳನ್ನು ಪಡೆದುಕೊಳ್ಳಲಾಗುವುದು.

13) ರಾತ್ರಿ ಪಾಳೆಯ ಜಾಗೃತಿ ಕರ್ತವ್ಯಕ್ಕೆ ಅಧಿಕಾರಿಗಳೊಂದಿಗೆ ವಾಹನವನ್ನು ನಿಯೋಜನೆ ಮಾಡಲಾಗುವುದು.

**14) ಅಂತಿಮ ನಿರ್ಧಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ ವಿಭಾಗ ಇವರ ನೇತೃತ್ವದ ಸಮಿತಿಯು ತೆಗೆದುಕೊಳ್ಳಲು ಅಧಿಕಾರವನ್ನು ಹೊಂದಿರುತ್ತಾರೆ.**

ಮೇಲೆ ತಿಳಿಸಿದ ಎಲ್ಲ ಷರತ್ತುಗಳನ್ನು ಒಪ್ಪಿಕೊಂಡು ಈ ಕಚೇರಿಯ ಕಾರ್ಯಾಲಯದಲ್ಲಿ ದಿನಾಂಕ:- 31/05/2016 ರ ಸಾಯಂಕಾಲ 5.30 ಘಂಟೆಯೊಳಗೆ ಅರ್ಜಿಯನ್ನು ವಾಹನದ ನೋಂದಣಿ ಪತ್ರ ಚಾಲನಾ ಲೈಸನ್ಸ್, ಇನ್ಸೂರನ್ಸ್, ಎಮಿಷನ ಟೆಸ್ಟ ರಿಪೋರ್ಟನ ಝುರಾಕ್ಸ ಪ್ರತಿಗಳೊಂದಿಗೆ ಸಲ್ಲಿಸತಕ್ಕದ್ದು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,
(ಜಾರಿ), ಉತ್ತರ ವಲಯ, ಬೆಳಗಾವಿ.
ವಿಭಾಗ ಬೆಳಗಾವಿ.

**ಪ್ರತಿಯನ್ನು :–**

1 .ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

2. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯ ವರ್ಧಿತ ತೆರಿಗೆ ವಿಭಾಗ, ಬೆಳಗಾವಿ ಇವರಿಗೆ ಶುಭಾಷಯಗಳೊಂದಿಗೆ, ಅಧಿಸೂಚನೆಯನ್ನು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ವಿನಂತಿಯೊಂದಿಗೆ.

3. ಮಾನ್ಯ ಪಾದೇಶಿಕ ಸಾರಿಗೆ ಅಧಿಕಾರಿಗಳು, ಬೆಳಗಾವಿ ಇವರಿಗೆ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ವಿನಂತಿಯೊಂದಿಗೆ.

4. ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇ–ಆಡಳಿತ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ಬೆಂಗಳೂರುರವರಿಗೆ ಇಲಾಖೆಯ ಅಂತರ್ಜಾಲ ತಾಣ ctx.kar.nic. & E-Notice Board ಎರಡರಲ್ಲಿ ಪ್ರಕಟಿಸಲು ಕೋರಿದೆ.

5. ಕಛೇರಿಯ ಪ್ರತಿ.

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಾರ್ಯಾಲಯ

(ಜಾರಿ), ಉತ್ತರ ವಲಯ, ಬೆಳಗಾವಿ ವಿಭಾಗ, ಬೆಳಗಾವಿ.

ದೂರವಾಣಿ ಸಂಖ್ಯೆ : 0831-2407370

ಸಂಖ್ಯೆ/ವಾಶಾ/ಸಿಆರ್-30/2016-17/ಬಿ-

ದಿನಾಂಕ : 24-05-2016.

**: ಟೆಂಡರ್ ಪ್ರಕಟಣೆ :**

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ ಇವರ ಕಛೇರಿಗೆ ಒಟ್ಟು 03 (ಮೂರು) ಖಾಸಗಿ ವಾಹನಗಳನ್ನು ಮಾಲೀಕರೇ ಚಾಲಕರು / ಟ್ರಾವೆಲ್ ಏಜೆನ್ಸಿದಾರರು / ಸಂಸ್ಥೆ ಇವರಿಂದ ಪ್ರತಿ ವಾಹನಕ್ಕೆ 2500 ಕೀ. ಮೀ ಗೆ ಗರಿಷ್ಠ ಮಾಸಿಕ ಬಾಡಿಗೆ ದರ ರೂ. 25,000/-ರಂತೆ, ತದನಂತರ ಓಡಿದಲ್ಲಿ ಪ್ರತಿ ಕೀ. ಮೀ ಗರಿಷ್ಟ ದರ ರೂ. 5.50 ರಂತೆ ಪಡೆಯಲು ಟೆಂಡರ್‌ನ್ನು ಆಹ್ವಾನಿಸಿದ್ದು, ಟೆಂಡರಿನ ಷರತ್ತುಗಳನ್ನು **ಈ ಕಛೇರಿಯ ನೋಟೀಸ ಬೋರ್ಡಿನಲ್ಲಿ** ಅಥವಾ **ಇಲಾಖಾ ಅಂರ್ತಜಾಲದಲ್ಲಿ** **http://ctax.kar.nic.in** ರಲ್ಲಿ ನೋಡಬಹುದು ಹಾಗೂ ಅರ್ಜಿಯನ್ನು ವಾಹನದ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ:31-05-2016ರ ಸಾಯಂಕಾಲ 5.30 ಗಂಟೆಯೊಳಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ **ಕಚೇರಿಯ ಸಮಯದೊಳಗೆ ದೂರವಾಣಿ: 0831-2407370ಯಲ್ಲಿ** ಸಂಪರ್ಕಿಸಬಹುದು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,
(ಜಾರಿ), ಉತ್ತರ ವಲಯ, ಬೆಳಗಾವಿ ವಿಭಾಗ,
ಬೆಳಗಾವಿ